**ಹಾನಗಲ್‌ನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಧಿಕಾರಿಗಳರವರ ನ್ಯಾಯಾಲಯದಲ್ಲಿ, ಹಾನಗಲ್**

**ಉಪಸ್ಥಿತರುಃ** ಶ್ರೀಮತಿ ಫಕೀರವ್ವ ಕೆಳಗೇರಿ, *ಬಿ.ಎ.,ಎಲ್ ಎಲ್ ಬಿ.*
ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು, ಹಾನಗಲ್.

**ಅಸಲ ದಾವಾ ನಂ.371/2017**

**ದಿನಾಂಕಃ 19 ನೇ ಡಿಸೆಂಬರ 2019**

ವಾದಿಯರು : ಲಲಿತಾ ಕೋಂ ಚಂದ್ರಶೇಖರಪ್ಪ ಹನಕನಹಳ್ಳಿ ಹಾಗೂ ಇತರರು.

(ವಕೀಲರಾದ ಶ್ರೀ ಬಿ.ಎಸ್.ಎ., ಇವರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ)

**ವಿರುದ್ಧ**

ಪ್ರತಿವಾದಿಯರು : ಮದ್ವಾಚಾರ್ಯ ತಂದೆ ವೆಂಕಣ್ಣ ಆಚಾರ್ಯ ಮಠದ ಹಾಗೂ ಇತರರು.

(ಪ್ರತಿವಾದಿ ನಂ.4 ನೇದವರ ಪರವಾಗಿ ವಕೀಲರಾದ ಶ್ರೀ ಸಿ.ಎಂ.ಎಚ್., ಇವರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ)

(ಪ್ರತಿವಾದಿ ನಂ.5 ರಿಂದ 9 ನೇದವರ ಪರವಾಗಿ ವಕೀಲರಾದ ಶ್ರೀ ಕೆ.ಸಿ.ಪಿ., ಇವರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ)

(ಪ್ರತಿವಾದಿ ನಂ.2(ಸಿ),(ಬಿ ) ನೇದವರು ಗೈರಾಗಿರುತ್ತಾರೆ)

(ಪ್ರತಿವಾದಿ ನಂ.1, 3 ನೇದವರು ಏಕತರ್ಫಿಯಾಗಿರುತ್ತಾರೆ)

**ಮಧ್ಯಂತರ ಅರ್ಜಿ ಸಂಖ್ಯೆ-2**

ಅರ್ಜಿದಾರ/8 ನೇ ವಾದಿ :ತಿರಕಪ್ಪ ತಂದೆ ಬಸವಣ್ಣೆಪ್ಪ ಹನಕನಹಳ್ಳಿ ಹಾಗೂ ಇತರರು.

**ವಿರುದ್ಧ**

ಎದುರುದಾರರು : ಮದ್ವಾಚಾರ್ಯ ತಂದೆ ವೆಂಕಣ್ಣ ಆಚಾರ್ಯ ಮಠದ ಹಾಗೂ ಇತರರು.

**ಮಧ್ಯಂತರ ಅರ್ಜಿ ಸಂಖ್ಯೆ-2 ಕ್ಕೆ ಆದೇಶ**

ಅರ್ಜಿದಾರ/8 ನೇ ವಾದಿ ತನ್ನ ಪ್ರಮಾಣಪತ್ರದಲ್ಲಿ ಹೇಳುವುದೇನೆಂದರೆ ದಾವಾ ಆಸ್ತಿಗಳಿಗೆ/ಜಮೀನುಗಳಿಗೆ ಹೋಗಿ ಬಂದು ಮಾಡಲು ಆಡೂರ ಗ್ರಾಮದ ರಿಸ ನಂ.108 ಎ ಹಾಗೂ

138/4 ಹಾತನಕಾಶೆಯಲ್ಲಿ ಎ,ಬಿ,ಸಿ, ಅಂತಾ ತೋರಿಸಿದ ರಸ್ತೆಗೆ ಪ್ರತಿವಾದಿಯರಾಗಲೀ ಅಥವಾ ಅವರ ತರ್ಫೆ ಇನ್ನಾರೇ ಆಗಲಿ ವಾದಿಯರಿಗೆ ಯಾವುದೇ ರೀತಿಯಿಂದ ಅಡ್ಡಿ ಆತಂಕ ಪಡಿಸದಂತೆ ಈ ದಾವೆ ಅಂತಿಮವಾಗಿ ನಿಖಾಲಿವಾಗುವವರೆಗೆ ತಾತ್ಪೂರ್ತಿಕ ನಿರ್ಭಂದಕಾಜ್ಞೆಯನ್ನು ನೀಡುವಂತೆ ಪ್ರಾರ್ಥಿಸಿರುತ್ತಾರೆ.

2. ಅರ್ಜಿದಾರ/8 ನೇ ವಾದಿಯು ತನ್ನ ಅರ್ಜಿಯ ಜೊತೆಗೆ ಇಟ್ಟಿರುವ ಪ್ರಮಾಣ ಪತ್ರದಲ್ಲಿ, ಹಾನಗಲ್ ತಾಲೂಕ ಆಡೂರ ಗ್ರಾಮದ ಹದ್ದಿ ಪೈಕಿ ಸಾಗುವಳಿ ಜಮೀನುಗಳಾದ ಸರ್ವೆ ನಂ.138/1 ಎ/1, 138/1 ಎ/2, 138/1 ಬ+1 ಕ, 138/2, 138/3, 138/5, 138/6, 138/7 ಜಮೀನುಗಳಿಗೆ ಹೋಗಿ ಬಂದು ಮಾಡಲು ಇರುವ ಆಡೂರ ಗ್ರಾಮದ ರಿಸ ನಂ.108 ಎ ಹಾಗೂ 138/4 ರಲ್ಲಿರುವ ಹಾತನಕಾಶೆಯಲ್ಲಿ ಎ,ಬಿ,ಸಿ ಅಂತಾ ತೋರಿಸಿದ ವಹಿವಾಟು ರಸ್ತೆ ಇರುತ್ತದೆ. ಸದರಿ ರಿಸ ನಂ.138 ನ್ನು ತಮ್ಮ ಪೂರ್ವಜರ ಕಾಲದಿಂದಲೂ ಅಂದರೆ 1935 ರಿಂದ ವಾರಸಾ ನಾಥೆಯಿಂದ ಮಾಲ್ಕಿ ಹೊಂದಿ ವಹಿವಾಟಿಸುತ್ತಾ ಬಂದದ್ದು ಇರುತ್ತದೆ.

3. ವಾದಿಯ ಪೂರ್ವಜರು ಆಡೂರ ಗ್ರಾಮದ ರಿಸ ನಂ.138 ಕ್ಷೇತ್ರ 19-32 ಗುಂಟೆಗೆ ಮಾಲೀಕರಿದ್ದು, ಪ್ರತಿವಾದಿ ನಂ.5 ರಿಂದ 9 ನೇದವರು ಸದರಿ ಸರ್ವೆ ನಂಬರನ ಕ್ಷೇತ್ರ 8 ಎ-24 ಗುಂಟೆ ಗೆ ಮಾಲೀಕರಾಗಿರುತ್ತಾರೆ. ಪ್ರತಿವಾದಿ ನಂ.1 ರಿಂದ 4 ನೇದವರು ಆಡೂರ ಗ್ರಾಮದ ರಿಸ ನಂ.108/ಎ ಜಮೀನಿನ ಮಾಲೀಕರಿದ್ದು, ವಾದಿಯರ ವಹಿವಾಟಿಯ ಜಮೀನುಗಳಿಗೆ ಆಡೂರ ಗ್ರಾಮದಿಂದ ಹಾವೇರಿ-ಹಾನಗಲ್ (ರಾಜ್ಯ ಹೆದ್ದಾರಿ) ಮುಖ್ಯ ರಸ್ತೆಯ ಮೂಲಕ ಪ್ರತಿವಾದಿ ನಂ.1 ರಿಂದ 4 ನೇದವರ ಜಮೀನು ರಿಸ ನಂ.108 ಎ ರ ವರೆಗೆ ಬಂದು ಸದರಿ ಜಮೀನಿನ ಪಶ್ಚಿಮದ ಗಡಿಯಲ್ಲಿರುವ 12 ಅಡಿ ಅಗಲದ ಬದುವಿನ ಮೇಲಿಂದ ಸುಮಾರು 100 ರಿಂದ 110 ಫೂಟ ದಾಟಿದ ನಂತರ 5 ರಿಂದ 9 ನೇ ಪ್ರತಿವಾದಿಯರ ಮಾಲ್ಕಿ ಜಮೀನು ರಿಸ ನಂ.138/4 ರ ದಕ್ಷಿಣದ ಅಂಚಿನಲ್ಲಿ ಮೊದಲಿನಿಂದಲೂ ಇದ್ದ 12 ಫೂಟ ಅಗಲದ ಬದುವಿನ (ಹೆಬ್ಬು ಬದ) ಮುಖಾಂತರ ಸುಮಾರು 90 ರಿಂದ 100 ಫೂಟ ದಾಟಿದ ನಂತರ ವಾದಿಯ ಜಮೀನು ರಿಸ ನಂ.138/3 ಕ್ಕೆ ತಲುಪುತ್ತದೆ ಹಾಗೂ ವಾದಿಯರು ತಮ್ಮ ಪೂರ್ವಜರ ಕಾಲದಿಂದಲೂ ಸದರಿ ಎ,ಬಿ,ಸಿ ವಹಿವಾಟ ರಸ್ತೆಯ ಮೂಲಕವೇ ವಹಿವಾಟಿಸುತ್ತಾ , ಚಕ್ಕಡಿ, ಟ್ರ್ಯಾಕ್ಟರ್ ಇತ್ಯಾದಿ ವಾಹನಗಳನ್ನು ತೆಗೆದುಕೊಂಡು ಹೋಗಿ ಬಂದು ಮಾಡುತ್ತಾ ಬಂದಿದ್ದು, ಪ್ರತಿವಾದಿ ನಂ.5 ರಿಂದ 9 ನೇದವರು ಕೂಡಾ ತಮ್ಮ ಜಮೀನು ರಿಸ ನಂ.138/4 ಕ್ಕೆ 1 ರಿಂದ 4 ನೇ ಪ್ರತಿವಾದಿಯರ ಮಾಲ್ಕಿ ಜಮೀನಾದ ರಿಸ ನಂ.108 ಎ ರ ಪಶ್ಚಿಮದ ಗಡಿಗುಂಟ ಇರುವ ವಹಿವಾಟಿ ದಾರಿ (ಬದುವು) (ಹಾತನಕಾಶೆಯಲ್ಲಿ ಎ,ಬಿ ಅಂತಾ ತೋರಿಸಿದ) ರಸ್ತೆಯ ಮುಖಾಂತರವೇ ಹೋಗಿ ಬರಬೇಕಾಗುತ್ತದೆ. ಸದರಿ ಎ,ಬಿ,ಸಿ ದಾರಿಯನ್ನು ಹೊರತುಪಡಿಸಿ ಬೇರೆ ಯಾವುದೇ ದಾರಿಯು ಇರುವುದಿಲ್ಲ. ಪ್ರತಿವಾದಿಯರು ಸದರಿ ದಾರಿಗೆ ಅಡ್ಡಿಆತಂಕ ಪಡಿಸುತ್ತಿದ್ದು, ಹಾಗೂ ಪ್ರತಿವಾದಿ ನಂ.1 ರಿಂದ 3 ನೇದವರು ಸದರಿ ರಸ್ತೆಗೆ

ಕೂಡುವ ಜಾಗಾದಲ್ಲಿದ್ದ ಪೈಪನ್ನು ಕೂಡಾ ಕಿತ್ತು ಹಾಕಿರುತ್ತಾರೆ. ಮೇಲ್ನೋಟಕ್ಕೆ ದಾವೆಯು ವಾದಿಯರ ಪರವಿದ್ದು, ಪ್ರತಿವಾದಿಯರನ್ನು ಕಾನೂನುಬದ್ಧವಾಗಿ ನಿಗ್ರಹಿಸದೇ ಹೋದಲ್ಲಿ ವಾದಿಯರಿಗೆ ತುಬಲಾರದ ಲುಕ್ಸಾನ ಆಗುತ್ತದೆ. ಆದ್ದರಿಂದ ಈ ದಾವೆಯನ್ನು ದಾಖಲಿಸಿ ಮಧ್ಯಂತರ ಅರ್ಜಿಯ ಮೂಲಕ ತಾತ್ಕಾಲಿಕ ತಾಕೀದಿ ಹುಕ್ಮು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

4. ಪ್ರತಿವಾದಿಯರು ತಮ್ಮ ವಕೀಲರ ಮೂಲಕ ಹಾಜರಾಗಿದ್ದು, ಪ್ರತಿವಾದಿ ನಂ.5 ರಿಂದ 9 ನೇದವರು ನ್ಯಾಯಾಲಯಕ್ಕೆ ಹಾಜರಾಗಿ ಈ ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿರುತ್ತಾರೆ. ಆದರೆ ಸದರಿ ತಕರಾರನ್ನು ಪರಿಶೀಲಿಸಿದಾಗ, ಪ್ರತಿವಾದಿ ತೆಗೆದುಕೊಂಡ ಎಲ್ಲಾ ತಕರಾರಿನ ಅಂಶಗಳು 2 ನೇ ಮಧ್ಯಂತರ ಅರ್ಜಿಗೆ ಸಲ್ಲಿಸಿದ ತಕರಾರಾಗಿರುತ್ತದೆ. 6 ನೇ ಪ್ರತಿವಾದಿಯು ಕೇವಲ ತನ್ನ ತಕರಾರಿನಲ್ಲಿ ತಪ್ಪಾಗಿ ಮಧ್ಯಂತರ ಅರ್ಜಿ ನಮೂದಿಸಿದ ಮಾತ್ರಕ್ಕೆ ಸದರಿ ತಕರಾರನ್ನು ಅಲ್ಲಗಳೆಯಲಾಗುವುದಿಲ್ಲ 6 ನೇ ಪ್ರತಿವಾದಿಯು ತನ್ನ ತಕರಾರಿನಲ್ಲಿ ಹೇಳುವುದೇನೆಂದರೆ, ಪ್ರತಿವಾದಿಯರು ಆಧರಿಸುವ ಹಾಗೆ ಎ,ಬಿ,ಸಿ,ಡಿ ದಾರಿ ಇರದೇ ವಾಸ್ತವದಲ್ಲಿ ಪ್ರತಿವಾದಿಯು ಪ್ರತಿವಾದ ಪತ್ರದೊಂದಿಗೆ ಸಲ್ಲಿಸಿದ ಹಾತ ನಕಾಶೆಯಲ್ಲಿ ತೋರಿಸಿದ ರಿಸ ನಂ.108/ಎ ಜಮೀನಿನ ಪಶ್ಚಿಮದ ಬದುವಿನ ಎ,ಬಿ ಅಂತರ 27 ಮೀಟರ 27 ಇಂಚು (89 ಫೂಟ 1 ಇಂಚು), ಉತ್ತರಕ್ಕೆ ಕ್ರಮಿಸಿ ಈ ಪ್ರತಿವಾದಿಯರ ಜಮೀನಿನ ದಕ್ಷಿಣದ ಅಂಚನ್ನು ಸೇರಿ ನಂತರ ಪಶ್ಚಿಮಕ್ಕೆ ಬಿ,ಸಿ ಅಂತಾ 30 ಮೀಟರ 30 ಇಂಚು (166 ಫೂಟ 65 ಇಂಚು) ಕ್ರಮಿಸಿ ತಮ್ಮ ಜಮೀನಿಗೆ ಹೋಗಬೇಕಾಗುತ್ತದೆ ಅಂದರೆ ವಾದಿಯರ ಪ್ರಕಾರ ಅವರ ಒಟ್ಟು 77 ಮೀಟರ 57 ಇಂಚು ಉದ್ದ ಕ್ರಮಿಸಿ ಎಬಿ,ಸಿ ದಾರಿಯ ಮೂಲಕ ತಮ್ಮ ಜಮೀನಿಗೆ ಹೋಗಬೇಕಾಗುತ್ತದೆ. ಆದರೆ ವಾಸ್ತವದಲ್ಲಿ ಡಿ,ಇ ದಾರಿಯನ್ನು ಹಾನಗಲ್–ಹಾವೇರಿ ಮುಖ್ಯ ರಸ್ತೆಯಿಂದ, ರಿಸ ನಂ.112 ಎ ದಲ್ಲಿ ಹಾಯ್ದು ನೇರವಾಗಿ 41 ಮೀಟರ ಉದ್ದದ ದಾರಿಯನ್ನು ಕ್ರಮಿಸಿ ತಮ್ಮ ಜಮೀನಿಗೆ ತಲುಪಬೇಕಾಗುತ್ತದೆ. ವಾಸ್ತವದಲ್ಲಿ ಇ, ಡಿ ದಾರಿಯು ಅಸ್ತಿತ್ವದಲ್ಲಿರುತ್ತದೆ ಅಂತಾ ತಕರಾರನ್ನು ಸಲ್ಲಿಸಿ ಸದರಿ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಲು ವಿನಂತಿಸಿಕೊಂಡಿರುತ್ತಾರೆ.

5. ವಾದ ಮತ್ತು ಪ್ರತಿವಾದವನ್ನು ಆಲಿಸಿರುತ್ತೇನೆ. ದಾಖಲೆಗಳನ್ನು ಪರಿಶೀಲಿಸಿದ್ದೇನೆ. ನನ್ನ ಪರಿಗಣನೆಗೆ ಈ ಕೆಳಗಿನಂತೆ ಅಂಶಗಳು ಉದ್ಭವಿಸುತ್ತವೆ.

1. ಅರ್ಜಿದಾರ/8 ನೇ ವಾದಿ ತನ್ನ ಪರವಾಗಿ ಮೇಲ್ನೋಟಕ್ಕೆ ಉತ್ತಮವಾದ ಕೇಸು ಇದೆಯೆಂದು ತೋರಿಸಿ ಕೊಡುವರೇ?
2. ಅರ್ಜಿದಾರ/8 ನೇ ವಾದಿ ತನ್ನ ಪರವಾಗಿ ಅನುಕೂಲತೆಯ ಸಂತುಲನೆ ಇದೆಯೆಂದು ತೋರಿಸಿ ಕೊಡುವರೇ?

3. ಅರ್ಜಿದಾರ/8 ನೇ ವಾದಿ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡದೆ ಇದ್ದರೆ ತನಗೆ ತುಂಬಲಾರದ ನಷ್ಟ, ಕಷ್ಟ ಮತ್ತು ತೊಂದರೆ ಉಂಟಾಗುತ್ತದೆ ಎಂದು ತೋರಿಸಿ ಕೊಡುವರೆ?

4. ಯಾವ ಆದೇಶ?

6. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆ.

ಅಂಶ ನಂ.1 ರಿಂದ 3 ಃ ಸಕಾರಾತ್ಮಕವಾಗಿ

ಅಂಶ ನಂ.4 ಃ ಅಂತಿಮ ಆದೇಶದಂತೆ ಈ ಕೆಳಗಿನ ಕಾರಣಗಳಿಗಾಗಿಃ

## ಕಾರಣಗಳು

7. **ಅಂಶ ನಂ.1 ರಿಂದ 3**ಃ ಸದರಿ ಅಂಶಗಳು ಒಂದಕ್ಕೊಂದು ಅಂತರ ಸಂಬಂಧವನ್ನು ಹೊಂದಿರುವುದರಿಂದ ಮತ್ತು ಸಂಗತಿಗಳ ಪುನರಾವರ್ತನೆಯಾಗುವುದನ್ನು ತಡೆಯಲು ಅವುಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ.

8. ವಾದಿಯರು ಮೇಲ್ನೋಟಕ್ಕೆ ತಮ್ಮ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಆಡೂರ ಗ್ರಾಮದ ಗ್ರಾಮ ನಕಾಶೆಯನ್ನು, ರಿಸ ನಂ.138/3, ರಿಸ ನಂ.138/2, ರಿಸ ನಂ.138/7, ರಿಸ ನಂ.138/6, ರಿಸ ನಂ.138/1ಬ+1ಕ, ರಿಸ ನಂ.138/5, ರಿಸ ನಂ.138/1ಎ/2, ರಿಸ ನಂ.138/ಎ1/1, ರಿಸ ನಂ.108ಎ, ರಿಸ ನಂ.138/4 ನೇದ್ದವುಗಳಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳನ್ನು ವೆಂಕಣ್ಣಾಚಾರಿ ಈತನ ಮರಣ ಪ್ರಮಾಣ ಪತ್ರ, ಪಿ ಟಿ ಶೀಟ್, ರಿಸ ನಂ.138/2 ನೇದ್ದಕ್ಕೆ ಸಂಬಂಧಿಸಿದ ಖರೀದಿ ಪತ್ರವನ್ನು ಮತ್ತು ಎರಡು ಛಾಯಾಚಿತ್ರಗಳನ್ನು ಮತ್ತು ಚನಬಸಪ್ಪ ಗುಡ್ಡಪ್ಪ ಪೂಜಾರ ಈತನ ಶಪಥ ಪತ್ರ ಮತ್ತು ಆತನಿಗೆ ಸಂಬಂಧಿಸಿದ ರಿಸ ನಂ.112ಅ ಸಂಬಂಧಿಸಿದ ಪಹಣಿ ಪತಿಕೆಯನ್ನು ಮತ್ತು ಎರಡು ಛಾಯಾಚಿತ್ರಗಳನ್ನು, ಎಂ ಆರ್ ನಂ.61/2006-07, ಎಂ.ಆರ್ ನಂ.7234, ಎಂ ಆರ್ ಎಚ್-1/2015-16, ಎಂಇ ನಂ.3059, 5131, 5430, 2022 ಮತ್ತು ಪಿಟಿ ಶೀಟನ್ನು, ರಿಸ ನಂ.138/1ಎ/1, ರಿಸ ನಂ.138/1ಅ/2 ಮತ್ತು ರಿಸ ನಂ.138/1ಬ ನೇದ್ದಕ್ಕೆ ಸಂಬಂಧಿಸಿದ ಖರೀದಿ ಪತ್ರದ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

9. 6 ನೇ ಪ್ರತಿವಾದಿಯ ತನ್ನ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಬಸೀರಸಾಬ ತಂದೆ ಸೈದುಸಾಬ ಮಿಠಾಯಿಗಾರ ಮತ್ತು ಮಲ್ಲೇಶಪ್ಪ ಬಸವಣ್ಣೆಪ್ಪ ಹೋತನಹಳ್ಳಿ, ಬಸಪ್ಪ ಹನುಮಂತಪ್ಪ ಗಿಡ್ಡನಗೌಡರ ಇವರ ಶಪಥಪತ್ರಗಳನ್ನು ಮತ್ತು ಹಾತನಕಾಶೆಯನ್ನು ಹಾಜರುಪಡಿಸಿರುತ್ತಾರೆ

10. ಸದರ ಪ್ರಕರಣದಲ್ಲಿ ವಾದಿಯು ದಾವಾ ಜಮೀನುಗಳಿಗೆ ಹೋಗಿ ಬಂದು ಮಾಡಲು ರಿಸ ನಂ.108 ಎ ಮತ್ತು ರಿಸ ನಂ.138/4 ರಲ್ಲಿರುವ ವಹಿವಾಟಿ ರಸ್ತೆ ಅಂದರೆ ಹಾತನಕಾಶೆಯಲ್ಲಿ ತೋರಿಸಿದ ಎ,ಬಿ ರಸ್ತೆಯ ಮುಖಾಂತರ ವಹಿವಾಟಿಸಲು ವಾದಿಯರ ಪೂರ್ವಜರ ಕಾಲದಿಂದಲೂ ವಹಿವಾಟಿಸುತ್ತಾ ಬಂದಿರುವ ಬಗ್ಗೆ ಮತ್ತು ದಾವಾ ಜಮೀನು ರಿಸ ನಂ.138 ರಲ್ಲಿ ಕ್ಷೇತ್ರ 19 ಎ-32 ಗುಂಟೆ ಜಮೀನನ್ನು ಹಂತ ಹಂತವಾಗಿ 1935 ರಿಂದ 1967 ರ ಅವಧಿಯಲ್ಲಿ ಖರೀದಿಸಿ ಮಾಲ್ಕಿ ಹಕ್ಕನ್ನು ಹೊಂದಿರುತ್ತಾರೆ ಎನ್ನುವದಾಗಿರುತ್ತದೆ. ವಾದಿಯರು ಪ್ರತಿವಾದಿ ನಂ.1 ರಿಂದ 4 ನೇದವರ ಜಮೀನು ರಿಸ ನಂ.108 ಎ ನೇದ್ದರ ಪಶ್ಚಿಮದ ಗಡಿಯಲ್ಲಿರುವ 12 ಅಡಿ ಅಗಲದ ಬದುವಿನ ಮೇಲಿಂದ ಸುಮಾರು 100 ರಿಂದ 110 ಫೂಟ ದಾಟಿ ನಂತರ 5 ರಿಂದ 9 ಪ್ರತಿವಾದಿಯರ ಮಾಲ್ಕಿ ಜಮೀನಿನ ರಿಸ ನಂ.138/4 ನೇದ್ದರ ದಕ್ಷಿಣದ ಅಂಚಿನಲ್ಲಿ ಮೊದಲಿನಿಂದಲೂ ಇದ್ದಂತಹ 12 ಫೂಟ ಅಗಲದ ಬದುವಿನ ಸುಮಾರು 90 ರಿಂದ 100 ಫೂಟ ದಾಟಿದ ನಂತರ ತಮ್ಮ ಜಮೀನುಗಳಿಗೆ ಸದರಿ ದಾರಿಯು ಅವಶ್ಯಕ ವ ಅನಿವಾರ್ಯದ ವಹಿವಾಟಿ ದಾರಿಯಾಗಿರುತ್ತದೆ ಎನ್ನುವುದಾಗಿದೆ. ಪ್ರತಿವಾದಿಯರ ಪ್ರಕಾರ ಸದರಿ ಎ,ಬಿ,ಸಿ, ದಾರಿ ವಾಸ್ತವದಲ್ಲಿ ಅಸ್ತಿತ್ವದಲ್ಲಿರದೇ ಪ್ರತಿವಾದಿಯರು ಹಾಜರುಪಡಿಸಿದ ಹಾತನಕಾಶೆಯಲ್ಲಿ ತೋರಿಸಿದ ಹಾನಗಲ್-ಹಾವೇರಿ ಮುಖ್ಯ ರಸ್ತೆಯಿಂದ ಉತ್ತರಕ್ಕೆ ಇರುವ ರಿಸ ನಂ.112 ಎ ಇದರ ಮಧ್ಯ ಭಾಗದಲ್ಲಿ 41 ಮೀಟರ ಉದ್ದ ವ 15 ಫೂಟ ಅಗಲದ ಹಾತನಕಾಶೆಯಲ್ಲಿ ಇ,ಡಿ ಅಂತಾ ತೋರಿಸಿದ ರಸ್ತೆಯು ಅಸ್ತಿತ್ವದಲ್ಲಿರುತ್ತದೆ. ವಾದಿಯರು ಆಧರಿಸುವ ರಸ್ತೆಯು ಅಸ್ತಿತ್ವದಲ್ಲಿರುವುದಿಲ್ಲ ಅಂತಾ ಪ್ರತಿವಾದಿಸುತ್ತಾರೆ.

11. ವಾದಿಯು ಹಾಜರುಪಡಿಸಿದ ಎಲ್ಲ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಡೂರ ಗ್ರಾಮದ ರಿಸ ನಂ.138/3 ನೇದ್ದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ, 1 ನೇ ವಾದಿಯ ಹೆಸರು ದಾಖಲಾಗಿರುವುದು ಕಂಡುಬರುತ್ತದೆ. ರಿಸ ನಂ.138/3 ನೇದ್ದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ, 2 ಮತ್ತು 3 ನೇ ವಾದಿಯರ ಹೆಸರುಗಳು ದಾಖಲಾಗಿರುವುದು ಮತ್ತು ರಿಸ ನಂ.138/2 ನೇದ್ದಕ್ಕೆ ಸಂಬಧಿಸಿದ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ, 4 ನೇ ವಾದಿಯ ಹೆಸರು ದಾಖಲಾಗಿರುವುದು, ರಿಸ ನಂ.138/7 ನೇದ್ದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ, 5 ನೇ ವಾದಿಯ ಹೆಸರು ದಾಖಲಾಗಿರುವುದು, ರಿಸ ನಂ.138/6, ರಿಸ ನಂ.138/1 ಬ+1 ಕ ಮತ್ತು ರಿಸ ನಂ.138/5 ನೇದ್ದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ, 6 ಮತ್ತು 7 ನೇ ವಾದಿಯರ ಹೆಸರುಗಳು ದಾಖಲಾಗಿರುವುದು, ರಿಸ ನಂ.138/1 ಎ/2 ನೇದ್ದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ, 5 ನೇ ವಾದಿಯ ಹೆಸರು ದಾಖಲಾಗಿರುವುದು, ರಿಸ ನಂ.138/1 ಎ/1 ನೇದ್ದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ, 8 ನೇ ವಾದಿಯ ಹೆಸರು ದಾಖಲಾಗಿರುವುದು, ರಿಸ ನಂ.108 ಎ ನೇದ್ದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ, 1 ನೇ ಪ್ರತಿವಾದಿಯ ಹೆಸರು ದಾಖಲಾಗಿರುವುದು, ರಿಸ ನಂ.138/4 ನೇದ್ದಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು

ಪರಿಶೀಲಿಸಿದಾಗ, 5 ರಿಂದ 9 ನೇ ಪ್ರತಿವಾದಿಯರ ಹೆಸರುಗಳು ದಾಖಲಾಗಿರುವುದು ಕಂಡುಬರುತ್ತದೆ..

12. ವಾದ ಪತ್ರ ಮತ್ತು ಪ್ರತಿವಾದ ಪತ್ರಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ರಿಸ ನಂ.138 ಕ್ಷೇತ್ರ 19 ಎ–32 ಗುಂಟೆ ಜಮೀನು ವಾದಿಯರ ಮಾಲೀಕತ್ವದ ಜಮೀನು ಎನ್ನುವ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ಅದರಂತೆ ರಿಸ ನಂ.138 ನೇದ್ದರ ಪೂರ್ವ ಭಾಗದ 8 ಎ–24 ಗುಂಟೆ ಜಮೀನು ಪ್ರತಿವಾದಿಯ ಗಂಡ ರಾಮಚಂದ್ರ ಈತನ ಮಾಲ್ಕಿ ಆಸ್ತಿ ಎನ್ನುವ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ಸದರ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಯರ ನಡುವೆ ರಿಸ ನಂ.108 ಎ ಮತ್ತು 138/4 ನೇದ್ದವುಗಳಲ್ಲಿ ಇರುವ ವಹಿವಾಟಿ ರಸ್ತೆ ಹಾತ ನಕಾಶೆಯಲ್ಲಿ ತೋರಿಸಿದ ಎ,ಬಿ,ಸಿ ದಾರಿಯು ಅಸ್ತಿತ್ವದಲ್ಲಿದೆಯೇ ಅಥವಾ ಇಲ್ಲವೆ ಎನ್ನುವ ಬಗ್ಗೆ ವಿವಾದ ಇರುತ್ತದೆ. ವಾದಿ ಮತ್ತು ಪ್ರತಿವಾದಿಯರ ಪ್ರಕಾರ ಪ್ರತಿವಾದಿ ನಂ.1 ರಿಂದ 4 ನೇದವರ ಜಮೀನಿನ ಕ್ಷೇತ್ರ 24 ಗುಂಟೆ ಇದ್ದು, ಅದು ರಾಜ್ಯ ಹೆದ್ದಾರಿಗೆ ತಾಗಿ ಉದ್ದವಾಗಿ ಇದ್ದ ಕಾರಣ ಸರಕಾರದವರು ರಾಜ್ಯ ಹೆದ್ದಾರಿಯನ್ನು ಅಭಿವೃದ್ಧಿಪಡಿಸಿದ್ದರಿಂದ ಸದರಿ 24 ಗುಂಟೆ ಬೀಳು ಬಿದ್ದುದು ಇರುತ್ತದೆ. ಪ್ರತಿವಾದಿಗೆ ರಿಸ ನಂ.138 ಕ್ಷೇತ್ರದಲ್ಲಿ 8 ಎ– 24 ಗುಂಟೆ ಜಮೀನನು ಯಾವ ನಾಥೆಯಿಂದ ಬಂದಿರುತ್ತದೆ ಎನ್ನುವ ಬಗ್ಗೆ ತಮ್ಮ ಪ್ರತಿವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ ಆದರೆ ವಾದಿಯು ಹೇಳುವಂತೆ ಎ,ಬಿ,ಸಿ,ಡಿ ರಸ್ತೆ ಅಸ್ತಿವತ್ವದಲ್ಲಿರುವದಿಲ್ಲ ಅಂತಾ ಪ್ರತಿವಾದಿಸುತ್ತಾರೆ. ಇಬ್ಬರೂ ವ್ಯಕ್ತಿಗಳ ಶಪಥ ಪತ್ರಗಳು ಮತ್ತು ಅವರ ಪಹಣಿ ಪತ್ರಿಕೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

13. ವಾದಿಯು ವಾದಪತ್ರದೊಂದಿಗೆ ಹಾಜರುಪಡಿಸಿದ ಹಾತನಕಾಶೆ ಪರಿಶೀಲಿಸಿದಾಗ, ವಾದಿಯರ ಆಸ್ತಿಗಳ ಉತ್ತರದ ದಿಕ್ಕಿನಲ್ಲಿ ಸರಕಾರಿ ಕೆರೆ ಇದ್ದು, ಪೂರ್ವಕ್ಕೆ ದೊಡ್ಡಗೌಡರ ಪಾಟೀಲ ಇವರ ಜಮೀನು, ಪಶ್ಚಿಮಕ್ಕೆ ಪರಸಪ್ಪ ಹುಚ್ಚನವರ ಇವರ ಜಮೀನು ಇರುತ್ತದೆ. ಅದರಂತೆ ಆಡೂರ ಗ್ರಾಮದ ಹಾತನಕಾಶೆಯಲ್ಲಿಯೂ ಸಹಿತ ದಾವಾದಾಸ್ತಿಗಳ ಉತ್ತರದ ಕಡೆಗೆ ಸರಕಾರಿ ಕೆರೆ ಇದ್ದುದು ಕಂಡುಬರುತ್ತದೆ. ಮತ್ತು ಪೂರ್ವ–ಪಶ್ಚಿಮದಲ್ಲಿಯೂ ಸಹಿತ ರಿಸ ನಂ.130, 129 ಮತ್ತು 139 ಜಮೀನುಗಳಿರುವುದು ಕಂಡುಬರುತ್ತದೆ. ದಕ್ಷಿಣದ ಕಡೆಗೆ ಹಾನಗಲ್–ಹಾವೇರಿ ಮತ್ತು ರಿಸ ನಂ.138 ಮಧ್ಯ, ರಿಸ ನಂ.112 ಅ ಮತ್ತು 108 ಅ ಆಸ್ತಿಗಳಿರುವುದು ಕಂಡುಬರುತ್ತದೆ. ಈಗ ವಾದಿ ಮತ್ತು ಪ್ರತಿವಾದಿಯರ ಮಧ್ಯ ಇರುವ ಮುಖ್ಯವಾದ ವಿವಾದ ಏನೆಂದರೆ, ವಾದಿ ಆಧರಿಸುವ ಪ್ರಕಾರ ರಿಸ ನಂ108/ಅ ದಲ್ಲಿ ಮತ್ತು 138/4 ನೇದ್ದರಲ್ಲಿ ದಾರಿಯು ಅಸ್ತಿತ್ವದಲ್ಲಿದೆಯೋ ಅಥವಾ ಪ್ರತಿವಾದಿ ಆಧರಿಸುವ ಪ್ರಕಾರ ರಿಸ ನಂ.112/ಎ ನಲ್ಲಿ ಸುಸಜ್ಜಿತವಾದ ದಾರಿ ಅಸ್ತಿತ್ವದಲ್ಲಿಯೋ ಎನ್ನುವುದಾಗಿದೆ. ವಾದಿಯು ಸದರಿ ದಾರಿಯನ್ನು ಅನುಭೋಗಿಸುವ ಅನುಭೋಗದ ಹಕ್ಕನ್ನು ಹೊಂದಿದ್ದು, ಸದರಿ ದಾರಿಯನ್ನು ಹೊರತುಪಡಿಸಿ ದಾವಾದಾಸ್ತಿಗಳಿಗೆ ಹೋಗಿ ಬಂದು ಮಾಡಲು ಪರ್ಯಾಯ ದಾರಿ ಇಲ್ಲ ಎನ್ನುವುದನ್ನು ಸಾಬೀತುಪಡಿಸಬೇಕಾಗುತ್ತದೆ. ಅದರಂತೆ ಪ್ರತಿವಾದಿಯರು ಸಹಿತ ಸದರಿ ದಾವಾ

ದಾರಿಯನ್ನು ಹೊರತುಪಡಿಸಿ ವಾದಿಯರಿಗೆ ತಮ್ಮ ಜಮೀನುಗಳಿಗೆ ಹೋಗಲು ರಿಸ ನಂ.112/ಅ ನಲ್ಲಿ ಸುಸಜ್ಜಿತವಾದ ರಸ್ತೆ ಅಸ್ತಿತ್ವದಲ್ಲಿದೆಯೇ ಎಂಬುದನ್ನು ರುಜುವಾತುಪಡಿಸುವ ಹೊಣೆ ಪ್ರತಿವಾದಿ ನಂ.6 ನೇದವರ ಮೇಲೆ ಇರುತ್ತದೆ. ವಾದಿಯು ಹಾಜರುಪಡಿಸಿದ ದಾವಾದಾಸ್ತಿಗಳಿಗೆ ಸಂಬಂಧಿಸಿದ ಖರೀದಿ ಪತ್ರ ಗಳನ್ನು ಪರಿಶೀಲಿಸಿದಾಗ, ಸದರಿ ಖರೀದಿ ಪತ್ರದಲ್ಲಿ ವಾದಿ ಆಧರಿಸುವ ಎ.ಬಿ,ಸಿ,ದಾರಿಯು ಅಸ್ತಿತ್ವದಲ್ಲಿದ್ದ ಬಗ್ಗೆ ಕಂಡುಬರುವುದಿಲ್ಲ. ಅದರಂತೆ ಪ್ರತಿವಾದಿಯು ಆಧರಿಸಿದಂತೆ ರಿಸ ನಂ.112/ಎ ನಲ್ಲಿ ದಾರಿಯ ಬಗ್ಗೆ ಗ್ರಾಮ ನಕಾಶೆಯಲ್ಲಿ ಕಂಡುಬರುವುದಿಲ್ಲ. ಆದರೆ ವಾದಿಯು ಹಾಜರಪಡಿಸಿದ ಎಲ್ಲಾ ದಾಖಲಾತಿಗಳನ್ನುಂ ಪರಿಶೀಲಿಸಿದಾಗ, ಮೇಲ್ನೋಟಕ್ಕೆ ವಾದಿಯರು ಆಧರಿಸುವಂತೆ ವಾದಿಯರ ದಾವಾ ಜಮೀನುಗಳಿಗೆ ಹೋಗಿ ಬಂದು ಮಾಡಲು ರಿಸ ನಂ.108 ಎ ಹಾಗೂ 138/4 ರಲ್ಲಿ ಇರುವ ವಹಿವಾಟಿ ರಸ್ತೆಯನ್ನು ಹೊರತುಪಡಿಸಿ ಬೇರೆ ರಸ್ತೆ ಇರುವುದಿಲ್ಲ ಎನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಒಂದು ವೇಳೆ ಈ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಯರಿಗೆ ತಮ್ಮ ಜಮೀನುಗಳಿಗೆ ಟ್ರ್ಯಾಕ್ಟರ ಮತ್ತು ಲಾರಿ ಮೂಲಕ ಕಬ್ಬನ್ನು ತೆಗೆದುಕೊಂಡು ಹೋಗುವುದು ಮತ್ತು ಗಳೆ, ಚಕ್ಕಡಿಗಳನ್ನು ತೆಗೆದುಕೊಂಡು ಸಾಗುವಳಿ ಮಾಡಲು ಹೋಗಿ ಬಂದು ಮಾಡಲು ತೊಂದರೆಯಾಗುವ ಸಾಧ್ಯತೆ ಇರುತ್ತದೆ. ನ್ಯಾಯಾಲಯವು ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಬೇಕಾದರೆ ಮೇಲನ್ನೋಟಕ್ಕೆ ದಾವಾದಾಸ್ತಿಗಳು ವಾದಿಯರ ಸ್ವಾಧೀನದಲ್ಲಿವೆಯೇ ಎಂಬುದನ್ನು ನೋಡಬೇಕಾಗುತ್ತದೆ. ಸದರ ಪ್ರಕರಣದಲ್ಲಿ ದಾವಾದಾಸ್ತಿಗಳು ವಾದಿಯರ ಸ್ವಾಧೀನದಲ್ಲಿವೆ ಅಂತಾ ತೋರಿಸಲು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತಾರೆ. ವಾದಿಯರಿಗೆ ತಮ್ಮ ದಾವಾ ಜಮೀನುಗಳಿಗೆ ಹೋಗಲು ಎ,ಬಿ,ಸಿ ದಾರಿ ಹೊರತುಪಡಿಸಿ ಬೇರೆ ದಾರಿ ಇದೆಯೇ ಅಥವಾ ಇಲ್ಲವೋ ಅನ್ನುವ ಬಗ್ಗೆ ತಿಳಿಯಬೇಕಾದರೆ ಸಂಪೂರ್ಣ ಪ್ರಕರಣದ ವಿಚಾರಣೆಯ ಅಗತ್ಯತೆ ಇರುತ್ತದೆ. ಈ ಹಂತದಲ್ಲಿ ಈ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಗೆ ತುಂಬಲಾರದ ಹಾನಿಯುಂಟಾಗುತ್ತದೆ. ಇದರಿಂದ ಪ್ರತಿವಾದಿಯಾರಿಗೆ ಯಾವುದೇ ರೀತಿ ತೊಂದರೆ ವ ಹಾನಿ ಉಂಟಾಗುವುದಿಲ್ಲ. ಆದ್ದರಿಂದ ಸದರ ಅಂಶ ನಂ.1 ರಿಂದ 3 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

14. **ಅಂತ ನಂ.4ಃ** ಅಂಶ ನಂ. 1 ರಿಂದ 3 ಕ್ಕೆ ನೀಡಿದ ಕಾರಣ ಹಾಗೂ ಉತ್ತರಕ್ಕೆ ಅನುಗುಣವಾಗಿ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ

ಅರ್ಜಿದಾರ/ವಾದಿ ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ರನ್ವಯ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-2 ನ್ನು ಪುರಸ್ಕರಿಸಿದೆ.

ದಾವಾ ಆಸ್ತಿಗಳಿಗೆ/ಜಮೀನುಗಳಿಗೆ ಹೋಗಿ ಬಂದು ಮಾಡಲು ಆಡೂರ ಗ್ರಾಮದ ರಿಸ ನಂ.108 ಎ ಹಾಗೂ 138/4

ಹಾತನಕಾಶೆಯಲ್ಲಿ ಎ,ಬಿ,ಸಿ, ಅಂತಾ ತೋರಿಸಿದ ರಸ್ತೆಗೆ ಪ್ರತಿವಾದಿಯರಾಗಲೀ ಅಥವಾ ಅವರ ತರ್ಫೆ ಇನ್ನಾರೇ ಆಗಲಿ ವಾದಿಯರಿಗೆ ಯಾವುದೇ ರೀತಿಯಿಂದ ಅಡ್ಡಿ ಆತಂಕ ಪಡಿಸದಂತೆ ಈ ದಾವೆ ಅಂತಿಮವಾಗಿ ನಿಖಾಲಿವಾಗುವವರೆಗೆ ತಾತ್ಪೂರ್ತಿಕ ನಿರ್ಭಂದಕಾಜ್ಞೆಯನ್ನು ನೀಡಿದೆ.

ಖರ್ಚಿಗೆ ಸಂಬಂಧಿಸಿದಂತೆ ಯಾವುದೇ ಆದೇಶ ಇರುವುದಿಲ್ಲ.

(ಶೀಘ್ರಲಿಗಾರನಿಗೆ ನೇರವಾಗಿ ಕಂಪ್ಯೂಟರ ಮೇಲೆ ಉಕ್ತಲೇಖನವನ್ನು ಕೊಟ್ಟು ಅವರಿಂದ ಬೆರಳಚ್ಚುಪಡಿಸಿ ಅದನ್ನು ಓದಿ ತಿದ್ದಿ ನಂತರ ನನ್ನ ಸಹಿಯನ್ನು ಹಾಕಿ, ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ದಿನಾಂಕಃ 19-12-2019 ರಂದು ಉಚ್ಚರಿಸಲಾಯಿತು).

**(ಶ್ರೀಮತಿ ಫಕೀರವ್ವ ಕೆಳಗೇರಿ)**
ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಹಾನಗಲ್.